# ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.

## ದಿನಾಂಕಃ 11.07.2025

## ಸಿ.ಸಿ. ಸಂಖ್ಯೆ: 19/2018

ಪಿರ್ಯಾದಿದಾರರು : ಸರ್ಕಾರದ ಪರ ಆರಕ್ಷಕ ಉಪ ನಿರೀಕ್ಷಕರು,
ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ,
ಹುಣಸೂರು.

ವಿರುದ್ಧ

ಆರೋಪಿ/ಗಳು ಃ ಎ 1. ಶಿವು @ ಶಿವ
ಬಿನ್ ಮಹದೇವ @ ಮಹದೇವೇಗೌಡ ,
ವಯಸ್ಸು ಸುಮಾರು 22 ವರ್ಷಗಳು,

ಎ 2. ಮಲ್ಲೇಶ ಬಿನ್ ಮಹದೇವ @ ಮಹದೇವೇಗೌಡ ,
ವಯಸ್ಸು ಸುಮಾರು 26 ವರ್ಷಗಳು,

ಎ 3. ಸ್ವಾಮಿ ಬಿನ್ ಮಹದೇವ @ ಮಹದೇವೇಗೌಡ ,
ವಯಸ್ಸು ಸುಮಾರು 28 ವರ್ಷಗಳು,

ಎ 4. ಮಹದೇವ @ ಮಹದೇವೇಗೌಡ
ಬಿನ್ ಕಳ್ಳಕಟ್ಟೆ ಮಹದೇವ @ ಮಲ್ಲೇಗೌಡ ,
ವಯಸ್ಸು ಸುಮಾರು 58 ವರ್ಷಗಳು,

ಎ 5. ಶ್ರೀಮತಿ. ಪ್ರೇಮ
ಕೋಂ ಮಹದೇವ @ ಮಹದೇವೇಗೌಡ ,
ವಯಸ್ಸು ಸುಮಾರು 56 ವರ್ಷಗಳು,
ಎಲ್ಲರ ವಾಸಃ ಮೈಲಾಂಬೂರು ಗ್ರಾಮ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ರೀತ್ಯಾ ಆರೋಪಿಯ ಹೇಳಿಕೆ**

**ಪ್ರಶ್ನೆ 1:** ಈ ಮೊಕದ್ದಮೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?

**ಉತ್ತರಃ**

**ಪ್ರಶ್ನೆ 2:** ಪ್ರಾಸಾ.1 ರವರಾದ ಬಿ. ಲಕ್ಷ್ಮಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಚಾಸಾ-2 ನನ್ನ ಗಂಡ. ಚಾಸಾ-3 ನನ್ನ ಅತ್ತೆ. ಚಾಸಾ-4 ನನ್ನ ತಾಯಿ. ಆರೋಪಿತರು ನಮ್ಮ ಪಕ್ಕದ ಮನೆಯವರು. ಸುಮಾರು 5 ವರ್ಷಗಳ ಹಿಂದೆ ನಾನು ಹಾಗೂ ಚಾಸಾ-2 ರಿಂದ 5 ರವರು ಮನೆಯಲ್ಲಿದ್ದಾಗ ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಆರೋಪಿತರೆಲ್ಲರೂ ಗುಂಪಾಗಿ ಅಲ್ಲಿಗೆ ಬಂದು, ಮನೆಯ ಮುಂದೆ ಬಂದು ಬೋಳೀ ಮಕ್ಕಳಾ, ಸೂಳೇ ಮಕ್ಕಳಾ, ನಿಮಗೆ ಎಷ್ಟು ಹೇಳಿದರೂ ಕೇಳುತ್ತಿಲ್ಲ, ನಮಗೆ ಅರ್ಧ ಮನೆ ಬಿಡಿ ಎಂದು ಅವಾಚ್ಯವಾಗಿ ನಿಂದಿಸಿದರು. ಆಗ ಚಾಸಾ-2 ರವರು ಬಂದು 60-70 ವರ್ಷಗಳ ಹಿಂದೆ ಕಟ್ಟಿದ ಮನೆ, ಈಗ ಬಂದು ಕೇಳುತ್ತಾ ಇದ್ದೀರಾ ಎಂದಾಗ, 1ನೇ ಆರೋಪಿಯು ಚಾಸಾ-2 ರವರನ್ನು ತಬ್ಬಿ ಹಿಡಿದು ನೆಲಕ್ಕೆ ಕೆಡವಿದ. 2ನೇ ಆರೋಪಿ ಚಾಸಾ-2 ರವರ ಬಲತುಟಿಗೆ ಒದ್ದು, ಗಾಯಪಡಿಸಿದ. 3 ಮತ್ತು 4ನೇ ಆರೋಪಿತರು ಚಾಸಾ-2 ರವರ ಬಲಗಡೆಯ ಕಿಬ್ಬೊಟ್ಟೆಗೆ ತುಳಿದಿರುತ್ತಾರೆ. ಆಗ ಚಾಸಾ-3 ರವರು ಬಿಡಿಸಲು ಮುಂದಾದಾಗ, 1ನೇ ಆರೋಪಿ ದೊಣ್ಣೆಯಿಂದ ಚಾಸಾ-3 ರವರ ಬಲಬುಜಕ್ಕೆ ಮತ್ತು ಬಲಭಾಗದ ಹಣೆಗೆ ಹಾಗೂ ಬೆನ್ನಿಗೆ ಹೊಡೆದಿರುತ್ತಾನೆ. ಆಗ ಚಾಸಾ-4 ರವರು ಜಗಳ ಬಿಡಿಸಲು ಬಂದಾಗ, 1ನೇ ಆರೋಪಿ ಅದೇ ದೊಣ್ಣೆಯಿಂದ ಎಡಕಾಲಿನ ತೊಡೆಗೆ, ಹೆಬ್ಬರಳಿಗೆ ಹಾಗೂ ಎಡಭಾಗದ ಎದೆಗೆ ಹೊಡೆದಿರುತ್ತಾನೆ. ಆಗ ನಾನು ಜಗಳ ಬಿಡಿಸಲು ಹೋದಾಗ 5ನೇ ಆರೋಪಿ ನನ್ನ ಜುಟ್ಟು ಹಿಡಿದು ಎಳೆದಾಡಿರುತ್ತಾಳೆ. ಚಾಸಾ-5 ಹೊಡೆಯುವುದನ್ನು ನೋಡಿ ಬಿಡಿಸಲು ಬಂದಾಗ 2ನೇ ಆರೋಪಿ ಇನ್ನೊಂದು

ದೊಣ್ಣೆಯಿಂದ ಬಲಗೈ ಬೆರಳುಗಳಿಗೆ ಹೊಡೆದು ಗಾಯಪಡಿಸಿರುತ್ತಾನೆ. ಗಲಾಟೆ ಬಿಡಿಸಲು ಜನ ಬರುತ್ತಿದ್ದಾಗ 1 ನೇ ಆರೋಪಿ ಇವತ್ತಲ್ಲಾ ನಾಳೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದನು. ನಂತರ ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಾಸಾ-2 ರಿಂದ 4 ರವರನ್ನು ಸೇರಿಸಿರುತ್ತೇವೆ. ನಾನು ಆಸ್ಪತ್ರೆಗೆ ದಾಖಲಾಗಿಲ್ಲ, ಚಾಸಾ-5 ರವರಿಗೆ ಹೊರರೋಗಿಯಾಗಿ ಚಿಕಿತ್ಸೆ ಕೊಡಿಸಿರುತ್ತೇವೆ. ಆರೋಪಿತರು ನ್ಯಾಯ ಪಂಚಾಯಿತಿ ಮಾಡಬಹುದು ಎಂಬ ಕಾರಣಕ್ಕಾಗಿ, 2 ದಿನಗಳು ತಡೆದು, ಯಾರೂ ಬರದೇ ಇದ್ದುದ್ದರಿಂದ ತಡವಾಗಿ ಹೋಗಿ ದೂರು ಕೊಟ್ಟಿರುತ್ತೇವೆ.

ದೂರು ದಾಖಲಿಸಿದ ದಿನದಂದೇ ಪೊಲೀಸರು ನಮ್ಮ ಗ್ರಾಮದ ಬಳಿ ಬಂದಿದ್ದು, ಅಲ್ಲಿ ನಾನು ಹಾಜರಿದ್ದು, ಘಟನಾ ಸ್ಥಳವನ್ನು ತೋರಿಸಿದ ಮೇರೆಗೆ ಮಧ್ಯಾಹ್ನ 12.00 ರಿಂದ 1.00 ರವರೆಗೆ ಚಾಸಾ-8 ಮತ್ತು 9 ರವರ ಸಮಕ್ಷಮ ಮಹಜರ ಕ್ರಮ ಕೈಗೊಂಡು, ಸ್ಥಳದಿಂದ ಎರಡು ದೊಣ್ಣೆಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಎರಡು ದೊಣ್ಣೆಗಳನ್ನು ಪೊಲೀಸರು ನಿಪಿ-2 ರಂತೆ ಅಮಾನತುಪಡಿಸಿಕೊಂಡಿರುತ್ತಾರೆ. ಪ್ರಕರಣದ ಸಂಬಂಧ ಮನೆಯ ಬಳಿಯೇ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರೇ ನನ್ನ ಹಾಗೂ ಚಾಸಾ-2 ರಿಂದ 5 ರವರ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳಾಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಾ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5 ನೇ ಆರೋಪಿಯ ಉತ್ತರಃ**

**ಪ್ರಶ್ನೆ 3 ಃ** ಪ್ರಾಸಾ.2 ರವರಾದ ಮಲ್ಲೇಶ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಚಾಸಾ-1 ನನ್ನ ಹೆಂಡತಿ. ಚಾಸಾ-3 ನನ್ನ ತಾಯಿ. ಚಾಸಾ-4 ನನ್ನ ಅತ್ತೆ. ಆರೋಪಿತರು ನಮ್ಮ ಪಕ್ಕದ ಮನೆಯವರು. ಸುಮಾರು 5 ವರ್ಷಗಳ ಹಿಂದೆ ನಾನು ಹಾಗೂ ಚಾಸಾ-1, 3 ರಿಂದ 5 ರವರು ಮನೆಯಲ್ಲಿದ್ದಾಗ ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ಆರೋಪಿತರೆಲ್ಲರೂ ಒಗ್ಗಟ್ಟಾಗಿ ಅಲ್ಲಿಗೆ ಬಂದು, ಮನೆಯ ಹತ್ತಿರ ಬಂದು ಬೋಳಿ ಮಕ್ಕಳಾ, ಸೂಳೆ ಮಕ್ಕಳಾ, ಮನೆ ಬಿಡಿ ಎಂದು ಹೇಳಿದರು. ಆಗ ನಾನು 50-70 ವರ್ಷ ಆಗಿದೆ, ಯಾಕೆ ಬಿಡಲಿ ಅಂತ ಕೇಳಿದೆ. ಆಗ 1ನೇ ಆರೋಪಿಯು ನನ್ನನ್ನು ತಬ್ಬಿ ಹಿಡಿದು ನೆಲಕ್ಕೆ ಕೆಡವಿದ. 3 ಮತ್ತು 4ನೇ ಆರೋಪಿತರು ನನ್ನ ಬಲ ಪಕ್ಕೆಗೆ ತುಳಿದರು. 2ನೇ ಆರೋಪಿ ದೊಣ್ಣೆಯಿಂದ ನನ್ನ ಹಣೆ ಹಾಗೂ ತುಟಿಗೆ ಹೊಡೆದನು. ಆಗ ಚಾಸಾ-3 ರವರು ಬಿಡಿಸಲು ಮುಂದಾದಾಗ, 1ನೇ ಆರೋಪಿ ದೊಣ್ಣೆಯಿಂದ ಚಾಸಾ-3 ರವರ ಬಲಬುಜಕ್ಕೆ, ಪಕ್ಕೆಗೆ ಮತ್ತು ಹಣೆಗೆ ಹೊಡೆದಿರುತ್ತಾನೆ. ಆಗ ಚಾಸಾ-4 ರವರು ಸಹ ಜಗಳ ಬಿಡಿಸಲು ಬಂದಾಗ, 1ನೇ ಆರೋಪಿ ಅದೇ ದೊಣ್ಣೆಯಿಂದ ಎಡಕಾಲಿನ ತೊಡೆಗೆ ಮತ್ತು ಹೆಬ್ಬರಳಿಗೆ ಹೊಡೆದಿರುತ್ತಾನೆ. ಆಗ ಚಾಸಾ-1 ರವರು ಜಗಳ ಬಿಡಿಸಲು ಬಂದಾಗ, 5ನೇ ಆರೋಪಿ ಮುಂದಲೆ ಹಿಡಿದು ಎಳೆದಾಡಿರುತ್ತಾಳೆ. ಚಾಸಾ-5 ಹೊಡೆಯುವುದನ್ನು ನೋಡಿ ಬಿಡಿಸಲು ಬಂದಾಗ 2ನೇ ಆರೋಪಿ ಇನ್ನೊಂದು ದೊಣ್ಣೆಯಿಂದ ಎಡಗೈಗೆ ಹೊಡೆದು ಗಾಯಪಡಿಸಿರುತ್ತಾನೆ. ಚಾಸಾ-6 ಮತ್ತು 7 ರವರು ಉಪಹಾರ ಗೃಹದಲ್ಲಿ ಕುಳಿತಿದ್ದು, ಬಿಡಿಸಲು ಬಂದರು. ಆರೋಪಿತರು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ ಮನೆಗೆ ಹೋದರು. ನಂತರ ಚಾಸಾ-1 ರವರು ಹುಣಸೂರಿನ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ಹಾಗೂ ಚಾಸಾ-3 ಮತ್ತು 4 ರವರನ್ನು

ಸೇರಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರೇ ನಮ್ಮ ಮೇಲೆ ಹಲ್ಲೆ ಮಾಡಿದ ವ್ಯಕ್ತಿಗಳಾಗಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2 ನ್ನೇ ಆರೋಪಿತರು ನಮ್ಮ ಮೇಲೆ ಹಲ್ಲೆ ಮಾಡಲು ಉಪಯೋಗಿಸಿದ ದೊಣ್ಣೆಗಳಾಗಿರುತ್ತವೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಾ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5 ನೇ ಆರೋಪಿಯ ಉತ್ತರಃ**

**ಪ್ರಶ್ನೆ 4 ಃ** ಪ್ರಾಸಾ.3 ರವರಾದ ಮಲ್ಲಮ್ಮ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಚಾಸಾ-1 ನನ್ನ ಮಗಳು. ಚಾಸಾ-2 ನನ್ನ ಅಳಿಯ. ಚಾಸಾ-3 ನನ್ನ ಬೀಗತಿ. ಚಾಸಾ-5 ನನ್ನ ಮೊಮ್ಮಗ. ಚಾಸಾ-6 ರಿಂದ 9 ರವರು ನಮ್ಮ ಊರಿನವರು. ಆರೋಪಿತರು ನಮ್ಮ ಮಗಳ ಮನೆಯ ಬಲಗಡೆಯ ಪಕ್ಕದ ಮನೆಯವರು. ಚಾಸಾ-2 ಹಾಗೂ ನಮ್ಮ ಊರು ಎರಡೂ ಒಂದೇ. ಈಗ್ಗೆ 6 ವರ್ಷಗಳ ಹಿಂದೆ ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ನಾನು, ಚಾಸಾ-1 ರಿಂದ 3 ಮತ್ತು 5 ರವರು ನನ್ನ ಮಗಳ ಮನೆಯ ಮುಂದೆ ನಿಂತಿದ್ದಾಗ, ಚಾಸಾ-2 ರವರು ಹಾಗೂ ಆರೋಪಿತರು ಜಗಳವಾಡುತ್ತಿದ್ದರು. ಆಗ ಆರೋಪಿತರು ಚಾಸಾ-2 ರವರನ್ನು ಕೆಡವಿ ಹಲ್ಲೆ ಮಾಡುತ್ತಿದ್ದರು. ನಾನು, ಚಾಸಾ-1 ಮತ್ತು 3 ರವರು ಬಿಡಿಸಲು

ಹೋದಾಗ, 2ನೇ ಆರೋಪಿ ಚಾಸಾ-3 ರವರಿಗೆ ರಟ್ಟೆ, ಬೆನ್ನು ಮತ್ತು ಹೊಟ್ಟೆಗೆ ಹೊಡೆದು ನೋವುಂಟುಪಡಿಸಿದನು. 1 ರಿಂದ 4ನೇ ಆರೋಪಿತರು ಚಾಸಾ-2 ರವರನ್ನು ಕೆಡವಿ ಹೊಟ್ಟೆಗೆ, ಬೆನ್ನಿಗೆ ಹಾಗೂ ಬಾಯಿಗೆ ಹೊಡೆದಿರುತ್ತಾರೆ. ಬಿಡಿಸಲು ಹೋದ ನನಗೆ 1ನೇ ಆರೋಪಿ ದೊಣ್ಣೆಯಿಂದ ನನ್ನ ಎದೆಗೆ ಎದೆಗೆ, ಎಡ ತೊಡೆ, ಹಾಗೂ ಎಡ ಹೆಬ್ಬರಳಿಗೆ ಹಲ್ಲೆ ಮಾಡಿರುತ್ತಾನೆ. ಚಾಸಾ-2 ರವರು ನನ್ನನ್ನು ಹಾಗೂ ಚಾಸಾ-3 ರವರನ್ನು ಹುಣಸೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿರುತ್ತಾರೆ. ಆರೋಪಿತರು ಮನೆಯ ಜಾಗದ ಸಂಬಂಧ ಗಲಾಟೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2 ರಿಂದಲೇ ಆರೋಪಿತರು ನಮಗೆ ಹಲ್ಲೆ ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಸರ್ಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-3 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಪ್ರಾಸಾ-3 ರವರು ತಮ್ಮ ಪಾಟೀ ಸವಾಲಿನಲ್ಲಿ ದಿ:08.11.2017 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ನೀವು, ಚಾಸಾ-1 ರವರ ಮನೆಯ ಬಳಿ ಹೋಗಿದ್ದಾಗ, ನೀವು, ಚಾಸಾ-1 ರಿಂದ 3 ಮತ್ತು 5 ರವರು ಮಾತನಾಡುತ್ತಿದ್ದಾಗ, ಆರೋಪಿತರು ಬಂದು ಬೋಳಿ ಮಕ್ಕಳಾ, ಸೂಳೆ ಮಕ್ಕಳಾ ಎಂದು ಅವಾಚ್ಯವಾಗಿ ಬೈದು, ಮನೆ ಇನ್ನು ಬಿಟ್ಟು ಕೊಟ್ಟಿಲ್ಲ ಎಂದು ನಿಂದಿಸಿದರು ಎಂದರೆ ಸರಿ. ಆಗ ಚಾಸಾ-2 ರವರು ಆರೋಪಿತರನ್ನು ಯಾಕೆ ಬಯ್ಯುತ್ತಿದ್ದೀರಾ ಎಂದು ಕೇಳಿದ್ದು, ಆರೋಪಿತರು ಬೋಳಿ ಮಗನೆ, ಸೂಳೆ ಮಗನೆ ಎಂದು ಬೈದು, ಚಾಸಾ-2 ರವರನ್ನು ಕೆಡವಿಕೊಂಡು ಹಲ್ಲೆ ಮಾಡಿರುತ್ತಾರೆಂದರೆ ಸರಿ. ಚಾಸಾ-1 ರವರು ಬಿಡಿಸಲು ಮುಂದಾದಾಗ 5ನೇ ಆರೋಪಿ ಮುಂದೆಲೆ ಹಿಡಿದು

ಎಳೆದು, ಕೆಡವಿ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಚಾಸಾ-5 ರವರು ಬಿಡಿಸಲು ಮುಂದಾದಾಗ 2ನೇ ಆರೋಪಿ ದೊಣ್ಣೆಯಿಂದ ಬಲಕೈ ಬೆರಳಿಗೆ ಹಲ್ಲೆ ಮಾಡಿರುತ್ತಾರೆಂದರೆ ಸರಿ. ಆರೋಪಿತರೆಲ್ಲರೂ ಸೇರಿ ಕೊಲೆ ಮಾಡುವುದಾಗಿ ನಿಮ್ಮಗಳಿಗೆ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ಆಗ ಚಾಸಾ-6 ಮತ್ತು 7 ರವರು ಬಂದು ಜಗಳ ಬಿಡಿಸಿರುತ್ತಾರೆಂದರೆ ಸರಿ. ಈಗ ಓದಿ ಹೇಳಿದಂತೆ ಪೊಲೀಸರ ಸಮಕ್ಷಮ ಹೇಳಿಕೆ ನೀಡಿದ್ದೇನೆಂದರೆ ಸರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಾ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5ನೇ ಆರೋಪಿಯ ಉತ್ತರಃ**

**ಪ್ರಶ್ನೆ 5 ಃ** ಪ್ರಾಸಾ.4 ರವರಾದ ಕಿರಣ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಚಾಸಾ-1 ನನ್ನ ತಾಯಿ. ಚಾಸಾ-2 ನನ್ನ ತಂದೆ. ಚಾಸಾ-3 ಮತ್ತು 4 ನನ್ನ ಅಜ್ಜಿಯಂದಿರು. ಚಾಸಾ-6 ರಿಂದ 9 ರವರು ನಮ್ಮ ಊರಿನವರು. ಆರೋಪಿತರು ಗೊತ್ತು, ನಮ್ಮ ಮನೆಯ ಪಕ್ಕದವರು. ದಿಃ08.11.2017 ರಂದು ಬೆಳಿಗ್ಗೆ 8.00 ಗಂಟೆ ಸಮಯದಲ್ಲಿ ನಾನು, ಚಾಸಾ-1 ರಿಂದ 4 ರವರು ನಮ್ಮ ಮನೆಯ ಬಳಿ ಇದ್ದಾಗ, 1ನೇ ಆರೋಪಿ ಬೊಳಿ ಮಕ್ಕಳಾ, ಸೂಳೆ ಮಕ್ಕಳಾ, ನಮ್ಮ ಜಾಗದಲ್ಲಿ ಮನೆ ಕಟ್ಟಿದ್ದೀರಾ ಎಂದು ಬೈಯುತ್ತಿದ್ದರು. ಆಗ ಚಾಸಾ-2

ರವರು ಆರೋಪಿತರನ್ನು 60 ವರ್ಷಗಳಿಂದ ಮನೆ ಕಟ್ಟಿರುವುದು ಈಗ ಕೇಳುತ್ತಿದ್ದೀರಾ ಎಂದು ಕೇಳಿದ್ದಕ್ಕೆ, 1ನೇ ಆರೋಪಿ ಚಾಸಾ-2 ರವರನ್ನು ಕೆಳಗೆ ಕೆಡವಿದರು. 2 ರಿಂದ 4ನೇ ಆರೋಪಿತರು ಕಾಲಿನಿಂದ ತುಳಿದರು. ಆಗ ಚಾಸಾ-3 ರವರು ಬಿಡಿಸಲು ಮುಂದಾದಾಗ 1ನೇ ಆರೋಪಿ ದೊಣ್ಣೆಯಿಂದ ಬಲ ಬುಜಕ್ಕೆ ಹಾಗೂ ಬಲ ಸೊಂಟಕ್ಕೆ ಹಲ್ಲೆ ಮಾಡಿರುತ್ತಾರೆ. ಚಾಸಾ-4 ರವರು ಬಿಡಿಸಲು ಬಂದಾಗ, 1ನೇ ಆರೋಪಿ ಚಾಸಾ-4 ರವರಿಗೆ ಎಡತೊಡೆ, ಎಡಹೆಬ್ಬೆರಳು ಹಾಗೂ ಎಡಭಾಗದ ಎದೆಗೆ ಹೊಡೆದಿರುತ್ತಾನೆ. ಚಾಸಾ-1 ರವರು ಜಗಳ ಬಿಡಿಸಲು ಮುಂದಾದಾಗ 5ನೇ ಆರೋಪಿ ಚಾಸಾ-1 ರವರು ಜುಟ್ಟು ಹಿಡಿದು ಎಳೆದಾಡಿ, ಬೀಳಿಸಿರುತ್ತಾರೆ. ಆಗ ನಾನು ಬಿಡಿಸಲು ಮುಂದಾದಾಗ 2ನೇ ಆರೋಪಿ ದೊಣ್ಣೆಯಿಂದ ನನ್ನ ಬಲಹೆಬ್ಬೆರಳಿಗೆ ಹೊಡೆದಿರುತ್ತಾರೆ. ಗ್ರಾಮಸ್ಥರೆಲ್ಲರೂ ಸೇರಿ ನಮ್ಮನ್ನು ಆಸ್ಪತ್ರೆಗೆ ಕಳುಹಿಸಿರುತ್ತಾರೆ. 1ನೇ ಆರೋಪಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾನೆ. ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2 ರಿಂದಲೇ ಆರೋಪಿತರು ನಮ್ಮಗಳ ಮೇಲೆ ಹಲ್ಲೆ ಮಾಡಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಪೊಲೀಸರ ಸಮಕ್ಷಮ ಮೇಲೆ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

ಸರ್ಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-4 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಪ್ರಾಸಾ-4 ರವರು ತಮ್ಮ ಪಾಟೀ ಸವಾಲಿನಲ್ಲಿ 1 ರಿಂದ 5ನೇ ಆರೋಪಿತರು ಎಲ್ಲರೂ ಸೇರಿ ನಿಮ್ಮಗಳನ್ನು ಸೂಳೆ ಮಕ್ಕಳಾ, ಬೋಳಿಮಕ್ಕಳಾ ಎಂದು ಅವಾಚ್ಯವಾಗಿ ನಿಂದಿಸಿರುತ್ತಾರೆಂದರೆ

ಸರಿ. 2ನೇ ಆರೋಪಿ ಕಾಲಿನಿಂದ ಚಾಸಾ-2 ರವರ ತುಟಿಯ ಬಳಿ ಒದ್ದಿರುತ್ತಾನೆ ಎಂದರೆ ಸರಿ. ಆರೋಪಿತರೆಲ್ಲರೂ ಸೇರಿ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ಚಾಸಾ-3 ಈಗ ಮೃತಪಟ್ಟಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಾ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5ನೇ ಆರೋಪಿಯ ಉತ್ತರಃ**

**ಪ್ರಶ್ನೆ 6 ಃ** ಪ್ರಾಸಾ.5 ರವರಾದ ಪುಟ್ಟಸ್ವಾಮಿಗೌಡ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ಚಾಸಾ-1 ರಿಂದ 5 ಮತ್ತು 7 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಚಾಸಾ-2 ರವರ ಮನೆ ಮುಂದೆ ಮೈಲಾಂಬೂರಲ್ಲಿ 6-7 ವರ್ಷಗಳ ಹಿಂದೆ ಸಂಜೆ 7.30-8.00 ಗಂಟೆ ಸಮಯದಲ್ಲಿ ಆರೋಪಿತರಿಗೂ ಹಾಗೂ ಚಾಸಾ-2 ರವರಿಗೂ ಗಲಾಟೆಯಾಗುತ್ತಿದ್ದು, ಆಗ ನಾನು ನಮ್ಮ ಮನೆಯ ಕಡೆಯಿಂದ ಊರಿನೊಳಗೆ ಆರೋಪಿತರ ಮನೆಯ ಮುಂದೆ ಬರುತ್ತಿದ್ದಾಗ, ಚಾಸಾ-2 ಮತ್ತು ಆರೋಪಿತರು ಕೂಗಾಡುತ್ತಿದ್ದರು. ಆಗ ಯಾಕೆ ಕೂಗಾಡುತ್ತಿದ್ದೀರಾ ಎಂದು ಕೇಳಿದೆ. ಆರೋಪಿತರು ನಮ್ಮ ಜಾಗಕ್ಕೆ ಯಾಕೆ ಮನೆ ಕಟ್ಟಿದ್ದೀರಾ ಎಂದು ಗಲಾಟೆ ಮಾಡುತ್ತಿದ್ದರು. ಚಾಸಾ-2

ರವರು ನಮ್ಮ ಜಾಗದಲ್ಲಿ ಮನೆ ಕಟ್ಟಿದ್ದೇವೆ, ನಿಮ್ಮ ಜಾಗಕ್ಕೆ ಬಂದಿಲ್ಲ ಎಂದು ಹೇಳುತ್ತಿದ್ದರು. ಆರೋಪಿತರ ಮನೆಯವರು ಚಾಸಾ-2 ರವರಿಗೆ ತುಟಿಯಲ್ಲಿ ರಕ್ತ ಬರುವ ಹಾಗೆ ಹೊಡೆದಿದ್ದರು. ನಾನು ಚಾಸಾ-2 ರವರಿಗೆ ಆಸ್ಪತ್ರೆಗೆ ಹೋಗುವಂತೆ ಹೇಳಿ ನಾನು ಊರಿನೊಳಗೆ ಹೋಗಿರುತ್ತೇನೆ.

ನಂತರ ಸಹಾಯಕ ಸರ್ಕಾರಿ ಅಭಿಯೋಜಕರು ಪ್ರಾಸಾ-5 ರವರನ್ನು ಪಾಟೀಸವಾಲಿಗೆ ಒಳಪಡಿಸಿದಾಗ ಪ್ರಾಸಾ-5 ರವರು ತಮ್ಮ ಪಾಟೀ ಸವಾಲಿನಲ್ಲಿ ನೀವು ಹಾಗೂ ಚಾಸಾ-1 ರಿಂದ 5 ಮತ್ತು 7 ರವರು ಚಾಸಾ-2 ರವರ ಮನೆಯ ಮುಂದೆ ನಿಂತು ಮಾತನಾಡುತ್ತಿದ್ದಾಗ, ಆಗ ಆರೋಪಿತರು ಗುಂಪು ಕಟ್ಟಿಕೊಂಡು ಬಂದು, ಚಾಸಾ-2 ರವರಿಗೆ ಬೋಳಿ ಮಕ್ಕಳಾ, ಸೂಳೆ ಮಕ್ಕಳಾ, ಮನೆ ಬಿಟ್ಟುಕೊಡಿ ಎಂದು ಬೈಯುತ್ತಿದ್ದರು ಎಂದರೆ ಸರಿ. ಆಗ ಚಾಸಾ-2 ರವರು ಕೇಳಲು ಹೋದಾಗ 1ನೇ ಆರೋಪಿ ಚಾಸಾ-2 ರವರನ್ನು ತಬ್ಬಿ ಹಿಡಿದಿದ್ದು, 2 ರಿಂದ 4ನೇ ಆರೋಪಿತರು ಚಾಸಾ-2 ರವರನ್ನು ಕೆಳಗೆ ಬಿಳಿಸಿ, 2ನೇ ಆರೋಪಿ ಚಾಸಾ-2 ರವರಿಗೆ ಕಾಲಿನಿಂದ ಮೇಲ್ಭಾಗದ ತುಟಿ ಬಳಿ ತುಳಿದಿರುತ್ತಾರೆ ಎಂದರೆ ಸರಿ. ಆಗ ಚಾಸಾ-3 ರವರು ಬಿಡಿಸಲು ಹೋಗಿದ್ದು, 1ನೇ ಆರೋಪಿ ನ್ಯಾಯಾಲಯದ ಮುಂದಿರುವ ದೊಣ್ಣೆಯಿಂದ ಚಾಸಾ-3 ರವರಿಗೆ ಬಲಭಾಗದ ಬುಜದ ಹಿಂಭಾಗದ ಮೇಲ್ಭಾಗದಲ್ಲಿ, ಬಲ ಸೊಂಟದ ಮೇಲ್ಭಾಗದಲ್ಲಿ ಹೊಡೆದು ತೀವ್ರ ಸ್ವರೂಪದ ಗಾಯಪಡಿಸಿರುತ್ತಾರೆಂದರೆ ಸರಿ. ಚಾಸಾ-4 ರವರು ಬಿಡಿಸಲು ಮುಂದಾದಾಗ 1ನೇ ಆರೋಪಿ ದೊಣ್ಣೆಯಿಂದ ಎಡತೊಡೆ, ಎಡಹೆಬ್ಬೆರಳು ಹಾಗೂ ಎದೆಯ ಭಾಗಕ್ಕೆ ಹೊಡೆದು ಗಾಯಪಡಿಸಿರುತ್ತಾರೆಂದರೆ ಸರಿ. ಚಾಸಾ-1 ರವರು ಬಿಡಿಸಲು

ಮುಂದಾದಾಗ 5ನೇ ಆರೋಪಿ ಜುಟ್ಟು ಹಿಡಿದು ಎಳೆದಾಡಿ, ನೂಕಿರುತ್ತಾರೆ ಎಂದರೆ ಸರಿ. ಆರೋಪಿತರು ಹೋಗುವಾಗ ಚಾಸಾ-2 ರವರ ಕುಟುಂಬಕ್ಕೆ ಇವತ್ತಲ್ಲಾ ನಾಳೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆಂದರೆ ಸರಿ. ಆಗ ನೀವು ಹಾಗೂ ಚಾಸಾ-7 ರವರು ಗಲಾಟೆ ಬಿಡಿಸಿದ್ದು, ಚಾಸಾ-1 ರಿಂದ 5 ರವರು ಯಾವುದೋ ವಾಹನದಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಬಂದು ದಾಖಲಾಗಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಊರಿಗೆ ಬಂದಾಗ ಹೇಳಿರುತ್ತೇನೆ ಎಂದು ಹೇಳುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಾ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5**ನೇ ಆರೋಪಿಯ ಉತ್ತರಃ

**ಪ್ರಶ್ನೆ 7 ಃ** ಪ್ರಾಸಾ.6 ರವರಾದ ಮಲ್ಲೇಶ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ದಿಃ 11.11.2017 ರಂದು ಪೊಲೀಸರು ಬೆಳಿಗ್ಗೆ 11.00 ಗಂಟೆಗೆ ಮೈಲಾಂಬೂರಿನ ಚಾಸಾ-2 ರವರ ಮನೆಯ ಬಳಿ ಬಂದಿದ್ದು, ಪೊಲೀಸರು ಚಾಸಾ-2 ಹಾಗೂ ಆರೋಪಿತರು ಹೊಡೆದಾಟ ಮಾಡಿಕೊಂಡಿದ್ದಾರೆ, ಸಹಿ ಹಾಕುವಂತೆ ಹೇಳಿ ಸಹಿ ಮಾಡಿಸಿಕೊಂಡಿದ್ದರು. ನಿಪಿ-2 ರಲ್ಲಿ ಏನು ಬರೆದಿದೆ ಎಂದು ಓದಿಲ್ಲ.

ಚಾಸಾ-2 ರವರು ಎರಡು ದೊಣ್ಣೆಗಳನ್ನು ಪೊಲೀಸರಿಗೆ ತಂದು ಕೊಟ್ಟಿರುತ್ತಾರೆ. ಮು,ಮಾ-1 ಮತ್ತು 2 ನ್ನೇ ನಿಪಿ-2 ರಂತೆ ಪೊಲೀಸರ ಸಮಕ್ಷಮ ಹಾಜರುಪಡಿಸಿದ ದೊಣ್ಣೆಗಳಾಗಿರುತ್ತವೆ. ಸರ್ಕಾರಿ ಸಹಾಯಕ ಅಭಿಯೋಜಕರು ಪ್ರಾಸಾ-6 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಪ್ರಾಸಾ-6 ರವರು ತಮ್ಮ ಪಾಟೀ ಸವಾಲಿನಲ್ಲಿ ಪೊಲೀಸರು ಸ್ಥಳ ಮಹಜರ ಗೆ ಬಂದಾಗ ನಿಮ್ಮಿಂದ ನಿಪಿ-2 ಕ್ಕೆ ಸಹಿ ಪಡೆದಿರುತ್ತಾರೆಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಾ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5**ನೇ ಆರೋಪಿಯ ಉತ್ತರಃ

**ಪ್ರಶ್ನೆ 8 ಃ** ಪ್ರಾಸಾ.7 ರವರಾದ ಡಾಃ ಕೆ.ಎಸ್. ವಾಣಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ದಿಃ08.11.2017 ರಂದು ಬೆಳಿಗ್ಗೆ 9.15 ರ ಸಮಯದಲ್ಲಿ ಹಲ್ಲೆಯ ಹಿನ್ನೆಲೆಯಲ್ಲಿ ಚಾಸಾ-2 ರಿಂದ 4 ರವರು ಆಸ್ಪತ್ರೆಗೆ ಭೇಟಿ ನೀಡಿರುತ್ತಾರೆ. ಸದರಿಯವರನ್ನು ತಪಾಸಣೆ ಮಾಡಿದಾಗ ಚಾಸಾ-4 ರವರಿಗೆ 1) ಎಡತೋಡೆಯ ಮಧ್ಯಭಾಗದಲ್ಲಿ 4X1 ಸೆ.ಮೀ ರಕ್ತ ಹೆಪ್ಪುಗಟ್ಟಿದ ಗಾಯವಾಗಿತ್ತು, 2) ಎಡ ಹೆಬ್ಬರಳಿನ ಮೇಲೆ ಪರಚಿದ ಗಾಯ, 3) ಎದೆಗೆ ಒಳಪೆಟ್ಟು ಬಿದ್ದಿತ್ತು. ಸದರಿಯವರಿಗೆ

ಮೂಳೆಯ ತಜ್ಞರ ಬಳಿ ಹೆಚ್ಚಿನ ತಪಾಸಣೆಗೆ ಒಳಪಡಿಸಿರುತ್ತೇನೆ. ಈ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ್ದಾಗಿರುತ್ತದೆ. ಚಾಸಾ-2 ರವರನ್ನು ತಪಾಸಣೆ ಮಾಡಿದಾಗ 1) ಮೇಲು ತುಟಿಯಲ್ಲಿ ಕತ್ತರಿಸಿದ ಗಾಯವಿತ್ತು, 2) ಬಲಭಾಗದ ಹೊಟ್ಟೆಯ ಮೇಲೆ 0.5X0.5 ಸೆ.ಮೀ ತೆರಚಿದ ಗಾಯವಾಗಿತ್ತು. ದಂತ ವೈದ್ಯರಿಂದ ವರದಿಯನ್ನು ಪಡೆದ ನಂತರ ಸದರಿಯವರು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆಂದು ವರದಿ ನೀಡಿರುತ್ತಾರೆ. ಚಾಸಾ-3 ರವರನ್ನು ತಪಾಸಣೆ ಮಾಡಿದಾಗ 1) ಬಲಬೆನ್ನಿನ ಮೇಲ್ಭಾಗದಲ್ಲಿ ಊತವಿತ್ತು, ಕೈ ಮೇಲೆತ್ತಲು ಆಗುತ್ತಿರಲಿಲ್ಲ. ಸದರಿಯವರಿಗೆ ಮೂಳೆಯ ತಜ್ಞರ ಬಳಿ ಹೆಚ್ಚಿನ ತಪಾಸಣೆಗೆ ಒಳಪಡಿಸಿರುತ್ತೇನೆ. ಈ ಮೇಲೆ ಹೇಳಿದ ಗಾಯ ತೀವ್ರ ಸ್ವರೂಪದ್ದಾಗಿರುತ್ತದೆ. ಮು.ಮಾ-1 ಮತ್ತು 2 ರಿಂದ ಹಲ್ಲೆ ಮಾಡಿದಾಗ ಈ ಮೇಲೆ ಹೇಳಿದ ನಿಪಿ-3 ರಿಂದ 5 ಗಾಯಗಳು ಆಗುವ ಸಂಭವ ಇರುತ್ತದೆ. ಪೊಲೀಸರು ದಿಃ 06.12.2017 ರಂದು ನನ್ನ ಸಮಕ್ಷಮ ಮು.ಮಾ-1 ಮತ್ತು 2 ನ್ನು ಹಾಜರುಪಡಿಸಿದ್ದು, ನಾನು ಪೊಲೀಸರಿಗೆ ನಿಪಿ-3 ರಿಂದ 5 ಗಾಯಗಳು ಆಗುವ ಸಂಭವ ಇರುತ್ತದೆಂದು ನನ್ನ ಮುಂದುವರೆದ ವರದಿಯನ್ನು ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಾ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5**ನೇ ಆರೋಪಿಯ ಉತ್ತರಃ

ಪ್ರಶ್ನೆ **9** ಃ ಪ್ರಾಸಾ.8 ರವರಾದ ಬಿ. ಪುಟ್ಟಸ್ವಾಮಿ ರವರು ತಮ್ಮ ಸಾಕ್ಷ್ಯದಲ್ಲಿ ನುಡಿಯುವುದೇನೆಂದರೆ, ದಿ.11.11.2017 ರಂದು ಬೆಳಿಗ್ಗೆ9.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಗಣಿಕಿಕೃತ ದೂರನ್ನು ಸಲ್ಲಿಸಿದ ಮೇರೆಗೆ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊ. ಸಂಖ್ಯೆ 585/2017 ರಲ್ಲಿ ಕಲಂ 143,147,148,341,324,323, 506 ಸಹ ಕಲಂ 149 ಐ.ಪಿ.ಸಿ ರೀತಿಯ ಪ್ರಕರಣವನ್ನು ದಾಖಲಸಿಸಿಕೊಂಡಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಬೆಳಿಗ್ಗೆ 11.30ರಿಂದ 12.15ಗಂಟೆಯವರೆಗೆ ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಚಾ ಸಾ-8 ಮತ್ತು 9 ರ ಸಮಕ್ಷಮ ನಿಪಿ-2 ರಂತೆ ಸ್ಥಳ ಮಹಜರ್ ಕ್ರಮ ಜರುಗಿಸಿ, ಮು ಮಾ-1 ಮತ್ತು 2ನ್ನು ಜಪ್ತಿ ಮಾಡಿರುತ್ತೇನೆ. ನಂತರ ಚಾಸಾ-5 ಮತ್ತು 7 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ವಶಪಡಿಸಿಕೊಂಡ ಮು.ಮಾಲುಗಳನ್ನು ಠಾಣಾ ಮು.ಮಾಲು ಪಟ್ಟಿ 361/2017 ರಲ್ಲಿ ನಮೂದಿಸಿ ನ್ಯಾಯಾಲಯದ ಅನುಮತಿ ಪಡೆದುಕೊಂಡಿರುತ್ತೇನೆ. ದಿನಾಂಕ17.11.2017 ರಂದು ಆರೋಪಿತರು ಠಾಣೆಗೆ ಹಾಜರಾದ ಮೇರೆಗೆ ಅವರನ್ನು ವಿಚಾರಿಸಿ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಮುಚ್ಚಳಿಕೆ ಬರೆಸಿಕೊಂಡು ಠಾಣಾ ಜಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ11.11.2017 ರಂದು ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ22.11.2017 ರಂದು ಚಾಸಾ2 ರಿಂದ 4 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 23.11.2017 ರಂದು ಚಾಸಾ-2 ರಿಂದ 4 ರವರ ನಿಪಿ-3 ರಿಂದ 5 ರಂತೆ ಪಡೆದುಕೊಂಡಿರುತ್ತೇನೆ. ನಂತರ ದಿಃ04.12.2017 ರಂದು

ಚಾಸಾ-10 ರವರಿಗೆ ಹೆಚ್ಚುವರಿ ಅಭಿಪ್ರಾಯ ಕೋರಿ ಪತ್ರ ಬರೆದಿರುತ್ತೇನೆ. ದಿ:06.12.2017 ರಂದು ಚಾಸಾ-10 ರವರು ನಿಪಿ-6 ರಂತೆ ಹೆಚ್ಚುವರಿ ಅಭಿಪ್ರಾಯ ನೀಡಿರುತ್ತಾರೆ. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಆರೋಪ ಸಾಭಿತಾಗಿರುವುದರಿಂದ ನ್ಯಾಯಾಲಯಕ್ಕೆ ದೊ.ಪಟ್ಟಿ ಸಲ್ಲಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಾ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5**ನೇ ಆರೋಪಿಯ ಉತ್ತರಃ

**ಪ್ರಶ್ನೆ 10:** ಈ ಕೇಸಿನ ಬಗ್ಗೆ ನೀವು ಇನ್ನೂ ಹೇಳುವುದು ಏನಾದರೂ ಇದೆಯಾ**?**

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5**ನೇ ಆರೋಪಿಯ ಉತ್ತರಃ

**ಪ್ರಶ್ನೆ 11:** ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ? ಅವರ ವಿಚಾರಣೆ ಆಗಬೇಕೆ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5**ನೇ ಆರೋಪಿಯ ಉತ್ತರಃ

**ಪ್ರಶ್ನೆ12:** ನಿಮ್ಮ ಪರ ದಾಖಲೆಗಳು ಏನಾದರೂ ಇದೆಯಾ? ಅವುಗಳನ್ನು ಹಾಜರುಪಡಿಸುವಿರಾ?

**1 ನೇ ಆರೋಪಿಯ ಉತ್ತರಃ**

**2 ನೇ ಆರೋಪಿಯ ಉತ್ತರಃ**

**3 ನೇ ಆರೋಪಿಯ ಉತ್ತರಃ**

**4 ನೇ ಆರೋಪಿಯ ಉತ್ತರಃ**

**5**ನೇ ಆರೋಪಿಯ ಉತ್ತರಃ

ಮೇಲ್ಕಂಡ ಸಾಕ್ಷಿದಾರರ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಎದುರು ಆರೋಪಿತರುಗಳಿಗೆ ತಿಳಿದ ಬಾಷೆಯಾದ ಕನ್ನಡದಲ್ಲಿ ಓದಿ ಹೇಳಲಾಗಿದೆ ಹಾಗೂ **ಆರೋಪಿತರು** ಹೇಳಿದ ಉತ್ತರಗಳನ್ನು ಯಾಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಧೃಢೀಕರಿಸಲಾಗಿದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹುಣಸೂರು

1 ನೇ ಆರೋಪಿಯ ಸಹಿಃ

2 ನೇ ಆರೋಪಿಯ ಸಹಿಃ

3 ನೇ ಆರೋಪಿಯ ಸಹಿಃ

4 ನೇ ಆರೋಪಿಯ ಸಹಿಃ

5 ನೇ ಆರೋಪಿಯ ಸಹಿಃ